**<u>ಸಾಕ್ಷಿಯನ್ನು ದಿನಾಂಕ 07-09-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಆರ್ ಎಂ ವಕೀಲರಿಂದಃ</u>**

1. ನನ್ನ ತಂದೆ ಹೆಸರು ಸ್ವಾಮಿನಾಥ. ರುದ್ರೇಶ್ ಹೆಚ್ ಜಿ ನನ್ನ ಗಂಡ. ನನ್ನ ಹಾಗೂ ರುದ್ರೇಶ್ ರವರ ಮದುವೆ ಸಾಗರದ ಚೌಡೇಶ್ವರಿ ದೇವಸ್ಥಾನದಲ್ಲಿ ಆಯಿತು, ಆ ನಂತರ ನಾವು ಸಾಗರದಲ್ಲಿಯೇ ವಾಸವಿದ್ದು, ನಂತರ ಹೊನ್ನಳ್ಳಿ ಹಾಗೂ ಶಿವಮೊಗ್ಗದಲ್ಲಿ ಒಟ್ಟಿಗೆ ವಾಸ ಮಾಡುತ್ತಿದ್ದೇವೆ ಎಂಬ ವಿಷಯವನ್ನು ವಾದ ಪತ್ರದಲ್ಲಿ ಬರೆಸಿದ್ದೇನೆ. ಸದರಿ ವಿಷಯಗಳನ್ನು ಬರೆಸಿಲ್ಲ ಎಂದರೆ ಸರಿಯಲ್ಲ.
2. ನಾನು ಮಂಗೋಟೆ ಗ್ರಾಮದಲ್ಲಿ ಯಾವತ್ತು ವಾಸವಿರಲಿಲ್ಲ. ಯಾವ ದಾಖಲೆಯ ಆಧಾರದಲ್ಲಿ ದಾವಾ ಸ್ವತ್ತುಗಳು ನನ್ನ ಒಟ್ಟು ಕುಟುಂಬದ ಸ್ವತ್ತು ಎಂದು ಬರೆಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ರುದ್ರೇಶ್ ನನ್ನ ಗಂಡನಾಗಿರುವುದರಿಂದ ಬರೆಸಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತುಗಳ ಮೂಲ ದಾಖಲೆಗಳನ್ನು ನಾನು ನೋಡಿಲ್ಲ. ನಿಪಿ–3 ರಿಂದ 11 ರ ದಾಖಲೆಗಳನ್ನು ಈ ದಾವೆ ದಾಖಲಿಸುವ ಮೊದಲು ನಾನೇ ತೆಗೆಸಿದ್ದೆ. ನನ್ನ ಪರವಾಗಿ ಸಾಕ್ಷಿ ಪಟ್ಟಿಯಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳು ಸದರಿ ದಾಖಲೆಗಳನ್ನು ನನಗೆ ಒದಗಿಸಿದ್ದಾರೆ ಎಂದರೆ ಸರಿಯಲ್ಲ.
3. ಅಪ್ರಾಪ್ತ ವಾದಿ ಜ್ಞಾನೇಶನಿಗೂ, ಪ್ರತಿವಾದಿಯರಿಗೂ ಹಾಗೂ ರುದ್ರೇಶ್ ರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ರುದ್ರೇಶ್ ರವರ ದಾಂಪತ್ಯದಿಂದ ಆತ ಜನಿಸಿದ್ದಾನೆ ಎಂದು ನಾನು ಹೇಳುತ್ತಿರುವುದು ಸುಳ್ಳು ಎಂದರೆ

ಸರಿಯಲ್ಲ. ರುದ್ರೇಶ್ ಮಂಗೋಟೆ ಗ್ರಾಮದ ವಾಸಿ ಎಂದು ನಿಮಗೆ ಯಾರು ಹೇಳಿದರು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಗಂಡನೇ ಹೇಳಿದ್ದಾರೆ ಎನ್ನುತ್ತಾರೆ. ರುದ್ರೇಶ್ ಹಾಗೂ ಅವರ ಸಹೋದರರಾದ ಪ್ರತಿವಾದಿಯರ ಬಗ್ಗೆ ನನ್ನ ಪರವಾಗಿ ಸಾಕ್ಷಿ ಪಟ್ಟಿಯಲ್ಲಿ ಉಲ್ಲೇಖಿಸಲಾಗಿರುವ ವ್ಯಕ್ತಿಗಳೇ ನನಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸೃಷ್ಟಿ ಮಾಡಿದ ದಾಖಲೆಯ ಆಧಾರದ ಮೇಲೆ ಅಪ್ರಾಪ್ತ ವಾದಿ ನನ್ನ ಹಾಗೂ ರುದ್ರೇಶ್ ರವರ ಮಗ ಎಂದು ಸುಳ್ಳು ಹೇಳಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಐಟಂ ನಂಬರ್ 6 ರ ಮನೆ ನನ್ನ ಗಂಡನ ಕುಟುಂಬದವರಿಗೆ ಸಂಬಂಧಪಟ್ಟಿದೆ. ನಿಪಿ–11 ರ ದಾಖಲೆಯಲ್ಲಿ ಗುಡ್ಡದಮಲ್ಲಪ್ಪ ಬಿನ್ ಶಿವಪ್ಪ ಎಂದು ನಮೂದಿಸಿದೆ ಎಂದರೆ ಸರಿ. ಸಾಕ್ಷಿ ಪುನಃ ದಾಖಲೆಯಲ್ಲಿ ಆ ರೀತಿ ಇದೆ, ಆದರೆ ಮನೆ ನನ್ನ ಅಜ್ಜನಿಗೆ ಸೇರಿದ್ದು ಎಂದು ನನ್ನ ಗಂಡ ನನಗೆ ಹೇಳಿದರು ಎನ್ನುತ್ತಾರೆ. ಗುಡ್ಡದಮಲ್ಲಪ್ಪರವರ ತಂದೆ–ತಾಯಿ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ–11 ರ ದಾಖಲೆಯಲ್ಲಿ ಉಲ್ಲೇಖಿಸಿರುವ ಆಸ್ತಿಗೂ ಪ್ರತಿವಾದಿಯರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

5. ನಿಪಿ–1 ರ ವಂಶವೃಕ್ಷವನ್ನು ಪಡೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಸದರಿ ದಾಖಲೆಯನ್ನು ಓದಿದ್ದೇನೆ. ಸದರಿ ದಾಖಲೆಯನ್ನು ಖಾತೆ ಬದಲಾವಣೆಗೆ ಮತ್ತು ಇತರೇ ಸರ್ಕಾರಿ ಸೌಲಭ್ಯ ಪಡೆಯುವ ಸಲುವಾಗಿ ಬರೆಸಲಾಗಿದೆ ಎಂದು ನಮೂದು ಇದೆ ಎಂದರೆ ಸರಿ. ನ್ಯಾಯಾಲಯಕ್ಕೆ ಕೊಡಲು ತಯಾರಿಸಲಾಗಿದೆ ಎಂದು ಬರೆಸಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಈ ದಾವೆಗಾಗಿ ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ

ಗ್ರಾಮದಲ್ಲಿ ಮಂಗೋಟೆ ಗ್ರಾಮಸ್ಥರು ಸಾಕ್ಷಿಯಾಗಿ ಸಹಿ ಮಾಡಿಲ್ಲ.

6. ದಾವಾ ಸ್ವತ್ತುಗಳನ್ನು ನಾನು ಖುದ್ದಾಗಿ ನೋಡಿಲ್ಲ. ಸದರಿ ಸ್ವತ್ತಿನ ವಿವರಗಳನ್ನು ಮಂಗೋಟೆ ಗ್ರಾಮದ ಚಂದ್ರಶೇಖರ್ ಎಂಬುವವರು ನನಗೆ ಕೊಟ್ಟಿದ್ದರು. ನನ್ನ ಗಂಡ ಹೇಳಿದ ಪ್ರಕಾರ ದಾವಾ ಸ್ವತ್ತುಗಳು ಅವರ ಅಜ್ಜನಿಂದ ಬಂದಿದೆ. ಆ ಸಂಬಂಧ ನಾನು ದಾಖಲೆಯನ್ನು ನೋಡಿಲ್ಲ. ದಾವಾ ಸ್ವತ್ತುಗಳ ಚಕ್ಕುಬಂಧಿಯನ್ನು ಬರೆಸಿಲ್ಲ ಎಂದರೆ ಸರಿ. ಯಾಕೆ ಬರೆಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಸದರಿ ಆಸ್ತಿಗಳನ್ನು ಖುದ್ದಾಗಿ ನೋಡಿಲ್ಲದ ಕಾರಣ ಬರೆಸಿಲ್ಲ ಎನ್ನುತ್ತಾರೆ. ದಾವಾ ಐಟಂ ನಂಬರ್ 1, 3, 4 ಮತ್ತು 5 ರ ಆಸ್ತಿಗಳು ಪ್ರತಿವಾದಿಯರ ತಂದೆ ಗುಡ್ಡದಮಲ್ಲಪ್ಪ ಬಿನ್ ರುದ್ರಪ್ಪ ರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿ ಅವು ನಮ್ಮ ಅಜ್ಜನಿಗೆ ಸೇರಿದ್ದು ಎಂದು ನನ್ನ ಗಂಡ ಹೇಳುತ್ತಿದ್ದರು ಎನ್ನುತ್ತಾರೆ. ದಾವಾ ಐಟಂ ನಂಬರ್ 2 ನೇ ಸ್ವತ್ತು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್ 1,3, 4 ಮತುತ 5 ರ ಆಸ್ತಿಗಳನ್ನು ಬಹಳ ಹಿಂದೆಯೇ ಪಾಲು ವಿಭಾಗ ಮಾಡಿಕೊಂಡು ಪ್ರತಿವಾದಿಯರು ಪ್ರತ್ಯೇಕ ಸ್ವಾಧೀನ ಹೊಂದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

7. ಈ ದಾವೆ ದಾಖಲಿಸುವ ಮೊದಲು ಪ್ರತಿವಾದಿಯರಿಗೆ ನೋಟಿಸು ಕೊಟ್ಟಿದ್ದೆ. ಆ ಸಂಬಂಧ ದಾಖಲೆ ಕೊಡಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ನನ್ನ ವಕೀಲರಿಗೆ ಗೊತ್ತು. ಪ್ರತಿವಾದಿಯರು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ದಾವಾ ಆಸ್ತಿಗಳ ಖಾತೆಗಳನ್ನು ತಮ್ಮ ಜಂಟಿ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದು ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ ಎಂಬ

ಪ್ರಶ್ನೆಗೆ ಸಾಕ್ಷಿ ನನ್ನ ಗಂಡ ಹಾಗೂ ಅವರ ತಂದೆಯ ಮರಣ ಪ್ರಮಾಣ ಪತ್ರಗಳನ್ನು ಪಂಚಾಯಿತಿಗೆ ಕೊಟ್ಟು ಪಾಲು ವಿಭಾಗ ಮಾಡಿಕೊಳ್ಳಲು ಪ್ರತಿವಾದಿಯರು ಪ್ರಯತ್ನಿಸುತ್ತಿದ್ದಾರೆ ಎಂದು ನನಗೆ ಮಾಹಿತಿ ಬಂದಿತ್ತು, ಆಗ ನಾನು ಪಂಚಾಯಿತಿಗೆ ಹೋಗಿ ಪ್ರತಿವಾದಿಯವರು ಕೊಟ್ಟಿದ್ದ ದಾಖಲೆಗಳನ್ನು ನೋಡಿದ್ದೆ ಎನ್ನುತ್ತಾರೆ. ಸದರಿ ದಾಖಲೆಗಳನ್ನು ನಾನು ಪಂಚಾಯಿತಿಯಿಂದ ಪಡೆದುಕೊಳ್ಳಲಿಲ್ಲ. ಸದರಿ ದಾಖಲೆಗಳನ್ನು ಪಡೆಲು ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಪ್ರತಿವಾದಿಯರ ಅರ್ಜಿಗೆ ತಕರಾರು ಸಲ್ಲಿಸಿ ಬಂದಿದ್ದೇನೆ ಎನ್ನುತ್ತಾರೆ. ದಾಖಲೆಗಳನ್ನು ಸೃಷ್ಟಿಮಾಡಿ ಪ್ರತಿವಾದಿಯರು ಜಂಟಿ ಖಾತೆ ಮಾಡಿಸಲು ಪ್ರಯತ್ನಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಸ್ವತ್ತುಗಳನ್ನು ಪ್ರತಿವಾದಿಯರು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಯಾವ ಆಧಾರದಲ್ಲಿ ಬರೆಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಅವುಗಳ ಖಾತೆಯನ್ನು ಪ್ರತಿವಾದಿಯರು ತಮ್ಮ ಹೆಸರುಗಳಿಗೆ ಬದಲಾವಣೆ ಮಾಡಿಸುತ್ತಿದ್ದಾರೆ ಎಂಬ ವಿಷಯ ತಿಳಿದು ಖಾತೆ ಮಾಡಿಸಿಕೊಂಡು ಮಾರಾಟ ಮಾಡಬಹುದು ಎಂದು ಹೇಳಿದ್ದೇನೆ ಎನ್ನುತ್ತಾರೆ. ನನ್ನ ಗಂಡ ತೀರಿಕೊಳ್ಳುವ ಒಂದು ತಿಂಗಳ ಮೊದಲು ಪ್ರತಿವಾದಿಯರ ಬಳಿ ಹೋಗಿ ಪಾಲು ಕೇಳಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಪ್ರತಿವಾದಿಯರ ತಾಯಿ ನನ್ನ ಗಂಡನಿಗೂ ಮೊದಲೇ ತೀರಿಕೊಂಡಿದ್ದಾರೆ. ಆಕೆ ತೀರಿಕೊಂಡ ನಿಖರವಾದ ವರ್ಷ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಜೊತೆ ಅವರ ತಾಯಿಯೂ ಸೇರಿಕೊಂಡು ವಂಶವೃಕ್ಷ ಸೃಷ್ಟಿಮಾಡಿದ್ದಾರೆಂದು ನಾನು ವಾದ ಪತ್ರದಲ್ಲಿ ಬರೆಸಿಲ್ಲ.

10. ನನಗೆ ಮದುವೆಯಾಗಿದೆ ಎಂದರೆ ಸರಿ. ಅರುಣ್ ಕುಮಾರ್ ಎಂಬುವವರ ಜೊತೆ ನನ್ನ ಮದುವೆ ಒಂದು ವರ್ಷದ ಹಿಂದೆ ಆಗಿದೆ. ಈ ದಾವೆ ದಾಖಲಿಸುವ ಮೊದಲೇ ನನ್ನ ಮದುವೆಯಾಗಿದೆ. ಸದರಿ ವಿಷಯ ವಾದ ಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ವಕೀಲರಿಗೆ ಹೇಳಿದ್ದೆ, ಅವರು ಬರೆಸಿಲ್ಲ ಎನ್ನುತ್ತಾರೆ. ಈಗ ನನಗೆ ತೋರಿಸಲಾದ ಫೋಟೋದಲ್ಲಿ ಇರುವ ವ್ಯಕ್ತಿಯೇ ನನ್ನ ಗಂಡ ಅರುಣ್ ಕುಮಾರ್ ಎಂದರೆ ಸರಿ. ಸಾಕ್ಷಿ ಗುರುತಿಸಿದ ಫೋಟೋವನ್ನು **ನಿಡಿ-1** ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾದ ಫೋಟೋಗಳು ನನ್ನ ಹಾಗೂ ಅರುಣ್ ಕುಮಾರ್ ರವರ ಸಂದರ್ಭದಲ್ಲಿ ತೆಗೆಯಲಾದ ಫೋಟೋಗಳು ಎಂದರೆ ಸರಿ. ಸಾಕ್ಷಿ ಗುರುತಿಸಿದ ಫೋಟೋಗಳನ್ನು **ನಿಡಿ-2 ರಿಂದ 4** ಎಂದು ಗುರುತಿಸಲಾಯಿತು. ಹಲವು ವರ್ಷಗಳ ಹಿಂದೆಯೇ ನನ್ನ ಮದುವೆಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಒಂದು ವರ್ಷದ ಹಿಂದೆ ಆಗಿದೆ ಎನ್ನುತ್ತಾರೆ. ಆ ಬಗ್ಗೆ ದಾಖಲೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಮನೆಯಲ್ಲಿಯೇ ಮದುವೆ ಮಾಡಿಕೊಂಡಿದ್ದೇವೆ ಯಾವುದೇ ದಾಖಲೆ ಮಾಡಿಸಿಲ್ಲ ಎನ್ನುತ್ತಾರೆ.

11. ಈ ದಾವೆ ದಾಖಲಾದ ನಂತರ ನಾನು ಗರ್ಭಿಣಿಯಾಗಿದ್ದೆ ಎಂದರೆ ಸರಿ. ದಿನಾಂಕ 19-8-2026 ರಂದು ನಾನು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಬಂದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಮಗು ಜನಿಸುವುದು ಇಷ್ಟವಿರಲಿಲ್ಲ, ಹಾಗಾಗಿ ಅದನ್ನು ಗರ್ಭಪಾತ ಮಾಡಿಸಲು ಹೋಗಿದ್ದೆ ಎನ್ನುತ್ತಾರೆ. ನನ್ನ ಗಂಡ ಅರುಣ್ ಕುಮಾರ್ ರವರನ್ನು ಕರೆಸಿ ನಮ್ಮ ಮದುವೆ ಒಂದು ವರ್ಷದ ಹಿಂದೆ ಆಗಿತ್ತು ಎಂದು ಸಾಕ್ಷಿ ಹೇಳಿಸಲು ನನಗೆ

ತೊಂದರೆ ಇಲ್ಲ ಎಂದರೆ ಸರಿ.

12. 1, 3 ಮತ್ತು 4 ನೇ ಪ್ರತಿವಾದಿಯರನ್ನು ನಾನು ನೋಡಿದ್ದೇನೆ, ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯನ್ನು ನನ್ನ ಗಂಡನ ಜೊತೆ ಊರಿಗೆ ಹೋದಾಗ ನೋಡಿದ್ದೆ, ದಿನಾಂಕ ನೆನಪಿಲ್ಲ. ರುದ್ರೇಶ್ ಮೃತ ಪಟ್ಟ ವಿಷಯವಾಗಿ 2 ನೇ ಪ್ರತಿವಾದಿ ಠಾಣೆಗೆ ಬಂದಾಗ ಆತನನ್ನು ನೋಡಿದ್ದೆ ಎಂದರೆ ಸಾಕ್ಷಿ ನಾನು ಹಾಗೂ ನನ್ನ ಗಂಡ ಬಾಡಿಗೆ ಮನೆಗೆ ಹೋದಾಗ 2 ನೇ ಪ್ರತಿವಾದಿ ಬಂದು 50 ಸಾವಿರ ಹಣ ಕೊಟ್ಟಿದ್ದರು ಮತ್ತು ನನ್ನ ಮಗ ಹುಟ್ಟಿದಾಗಲೂ ಅವರು ಬಂದಿದ್ದರು ಎನ್ನುತ್ತಾರೆ. ಆ ಸಂಬಂಧ ದಾಖಲೆ ಇಲ್ಲ. ನನ್ನ ಮಗನ ನಾಮಕರಣ ಕಾರ್ಯಕ್ರಮ ಆಗಿದೆ. ಅದರ ಫೋಟೋಗಳು ಇದೆ. ನಾಮಕರಣ ಕಾರ್ಯಕ್ರಮಕ್ಕೆ ಪ್ರತಿವಾದಿಯರು ಬಂದಿಲ್ಲ. ರುದ್ರೇಶ್ ರವರ ಫೋಟೋ ನಾಮಕರಣ ಕಾರ್ಯಕ್ರಮದಲ್ಲಿ ಇದೆ.

13. ರುದ್ರೇಶ್ ರವರ ಹಿನ್ನೆಲೆಯನ್ನು ತಿಳಿದುಕೊಂಡು ಆತ ನನ್ನ ಗಂಡ ಹಾಗೂ ಅಪ್ರಾಪ್ತ ವಾದಿ ನಮ್ಮ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ನಮ್ಮ ಮಗ ಎಂದು ತೋರಿಸುವ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**